O.S. ನಂಬರಃ 25/2021

ಪಿ. ಡಬ್ಲ್ಯೂಃ 1

ದಿಃ 16-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ 5ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

ನಿಮ್ಮ ತಾಯಿಯ ಹೆಸರು ಏನು ಎಂದರೆ ಸಾಕ್ಷಿಯು ಯಮುನಾ ತಂದೆ ದಾಮು ನಾಯ್ಕು. ಯಮುನಾ ಇವರು ತಂದೆಯ ಹೆಸರು ಕಾಮಣ್ಣ ನಾಯ್ಕು. ಕಾಮಣ್ಣ ಇವರ ಹೆಂಡತಿಯ ಹೆಸರು ನನಗೆ ಗೊತ್ತಿರುವುದಿಲ್ಲ. ಯಮುನಾ ಹಾಗೂ ಕಲ್ಯಾಣಿ ಇವರು ಕಾಮಣ್ಣನ ಮಕ್ಕಳು ಎಂದು ತೋರಿಸಲು ದಾಖಲಾತಿಗಳು ಇವೆಯಾ ಎಂದರೆ ಹೌದು ಎಂದು ನುಡಿಯುತ್ತಾರೆ. ಯಮುನಾ ಮತ್ತು ಕಲ್ಯಾಣಿ ಇವರು ಶಾಲೆಗೆ ಏನಾದರೂ ಹೋಗಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಇವರಿಬ್ಬರು ಕಾಮಣ್ಣನ ಮಕ್ಕಳು ಎಂದು ತೋರಿಸಲು ಯಾರ ದಾಖಲಾತಿ ಇರುತ್ತವೆ ಎಂದರೆ ಸಾಕ್ಷಿಯು ಹುಟ್ಟಿದ ದಾಖಲಾತಿಗಳು ಇರುತ್ತವೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಇವರು ಎಲ್ಲಿ ಹುಟ್ಟಿದರು ಎಂದರೆ ಸಾಕ್ಷಿಯು ಬೊಬ್ರುವಾಡಾದಲ್ಲಿ ಹುಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ವರ್ಷದಲ್ಲಿ ಹುಟ್ಟಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ಯಾವ ವರ್ಷದಲ್ಲಿ ಇಬರ್ಬ್ಬರ

ಮದುವೆಯಾಗಿರುತ್ತದೆ ಎಂದು ಹೇಳಲು ಬರುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಚುಡಿಯಾ ಇವರು ಯಾವಾಗ ಹುಟ್ಟಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ಚುಡಿಯಾ ಇವರು ಮಾವನಾಗಬೇಕು. ದಾವಾ ಆಸ್ತಿಗಳನ್ನು ಚುಡಿಯಾ ಇವರೇ ಮೊದಲಿನಿಂದಲೂ ನೋಡಿಕೊಂಡು ಬರುತ್ತಿದ್ದರು ಎಂರದೆ ಸರಿ. ಸಾಕ್ಷಿಯು ಮುಂದುವರೆದು ನಮ್ಮ ತಾಯಿಯೂ ಸಹ ಸಹಾಯ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಚುಡಿಯಾ ಇವರು 1960 ಕ್ಕಿಂತ ಮೊದಲಿನಿಂದಲೂ ಸಂರಕ್ಷಿತ ರೈತ ಎಂದು ಸಾಗುವಳಿ ಮಾಡುತ್ತಾ ಬಂದಿರುತ್ತಾನೆ ಎಂದರೆ ಸರಿ. ಚುಡಿಯಾ ಇವರೇ ದಾವಾ ಜಮೀನುಗಳನ್ನು ಅಬಿವೃದ್ಧಿಪಡಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿ. ಚುಡಿಯಾ ಇವರು ವೈಯಕ್ತಿಕ ನಾತೆಯಿಂದ ಭೂ–ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಿದ್ದರಿಂದ ಅವರ ಹೆಸರಿಗೆ ಜಮೀನುಗಳು ಮಂಜೂರು ಆಗಿರುತ್ತವೆ ಎಂದರೆ ಸರಿ. ಸಾಕ್ಷಿಯು ಮುಂದುವರೇದು ನಮ್ಮ ತಾಯಿಯೂ ಸಹ ದಾವಾ ಜಮೀನುಗಳಲ್ಲಿ ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನೀವು ಸಲ್ಲಿಸಿರುವ ದಾವೆ ಯಾವ ಭಾಷೆಯಲ್ಲಿ ಇದೆ ಎಂದರೆ ಸಾಕ್ಷಿಯು ಆಂಗ್ಲಭಾಷೆಯಲ್ಲಿ ಎಂದು ನುಡಿಯುತ್ತಾರೆ. ದಾವೆಯಲ್ಲಿ ಬರೆದಿರುವ ಕೆಲವೊಂದು ಶಬ್ದಗಳ ಅರ್ಥ ಕೇಳಿದ ರೆ ಹೇಳಲು ಆಗುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವೆಯಲ್ಲಿ ಏನು ಬರೆದಿರುತ್ತಾರೆ ಎಂದು ನಿಖರವಾಗಿ ಹೇಳಲು ಆಗುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವೆ ಬರೆಯಲು ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾನೇ ಕೊಟ್ಟಿರುತ್ತೇನೆ. ಒಟ್ಟು ಕುಟುಂಬದ ಮನೆ ಇರುವ ಬಗ್ಗೆ ದಾಖಲಾತಿ ಏನಾದರೂ ಇದೆಯಾ ಎಂದರೆ ಹೌದು ಎಂದು ನುಡಿಯುತ್ತಾರೆ.

ಇದರ ಬಗ್ಗೆ ಮಾನ್ಯ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ದಾಖಲಾತಿಗಳು ಇವೆಯಾ ಎಂದರೆ ಇರುತ್ತವೆ, ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನೀವಾಗಲಿ, ನಿಮ್ಮ ತಾಯಿ ಯಮುನಾ ಆಗಲಿ ಅಥವಾ ಕಲ್ಯಾಣಿಯಾಗಲಿ ದಾವಾ ಆಸ್ತಿಗಳಲ್ಲಿ ಕಬ್ಜೆ ಹೊಂದಿರುತ್ತೀರಿ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಮುಟೇಶನ್ ಎಂಟ್ರಿ ನಂ.6071 ಇದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನೀವು ಈಗ ಹೇಳಿದ ಯಾವುದೇ ದಾಖಲಾತಿಗಳನ್ನೂ ಸಹ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಚುಡಿಯಾ ಕಾಮಣ್ಣ ನಾಯ್ಕ ಇವರು ಕಾಮಣ್ಣ ಇವರು ಮೃತಪಟ್ಟ ನಂತರ ಒಟ್ಟು ಕುಟುಂಬದ ಮ್ಯಾನೇಜರ್ ನಾತೆಯಿಂದ ವಾರಸಾ ಆಗಿ ದಾವಾ ಆಸ್ತಿಗಳಿಗೆ ಹಕ್ಕುದಾರನು ಆಗಿರುತ್ತಾನೆ ಎಂದು ಸುಳ್ಳು ಹೇಳುತ್ತೀರುವಿರಿ ಎಂದರೆ ಸರಿಯಲ್ಲ. ಚುಡಿಯಾ ಕಾಮಣ್ಣ ನಾಯ್ಕ ಇವರು ವೈಯಕ್ತಿಕ ನಾತೆಯಿಂದ ಸಂರಕ್ಷಿತ ರೈತನಾಗಿದ್ದನು ಎಂದರೆ ಸರಿಯಲ್ಲ. ಕಾಮಣ್ಣ ವೆಂಕಟೇಶ ನಾಯ್ಕ ಯಾವಾಗ ತೀರಿಕೊಂಡಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ಚುಡಿಯಾ ಕಾಮಣ್ಣ ನಾಯಕ ಇವರು ಯಾವಾಗ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅಂದಾಜು 30 ವರ್ಷವಾಗಿರಬಹುದು ಎಂದು ನುಡಿಯುತ್ತಾರೆ. ಚುಡಿಯಾ ಕಾಮಣ್ಣ ನಾಯ್ಕ ತೀರಿಕೊಂಡ ನಂತರ ವಾರಸಾ ಆಗಿ ಯಾರ ಹೆಸರಿಗೆ ಬಂದಿತ್ತು ಎಂದರೆ ಸಾಕ್ಷಿಯು 5ನೇ

ಪ್ರತಿವಾದಿಯ ಹೆಸರಿಗೆ ನಮಗೆ ತಿಳಿಸದೇ ಆಗಿರುತ್ತದೆ ಎಂದು ನುಡಿಯುತ್ತಾರೆ. ಈ ಬಗ್ಗೆ ನಿಮಗೆ ಯಾವಾಗ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ನಾವು ಆಸ್ತಿ ಬೇಕು ಎಂದು ನೋಡಿದಾಗ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಕಾಮಣ್ಣ ತೀರಿಕೊಂಡ ನಂತರ ವಾರಸಾ ನಾತೆಯಿಂದ ನಮ್ಮ ಹೆಸರು ದಾವಾ ಆಸ್ತಿಗಳಿಗೆ ಸಂಬಂಧಪಟ್ಟು ಸೇರಿಸಬೇಕು ಎಂದು ಅರ್ಜಿ ಕೊಡಲು ಏನಾದರೂ ತೊಂದರೆ ಇತ್ತಾ ಎಂದರೆ ಸಾಕ್ಷಿಯು ಆಗ ನಮಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಚುಡಿಯಾ ಇವರು ತೀರಿಹೋದ ನಂತರವೂ ಸಹ ಒಟ್ಟು ಕುಟುಂಬದ ಆಸ್ತಿ ಎಂದು ನಿಮ್ಮ ಹೆಸರು ಸೇರಿಸಲು ಅರ್ಜಿಯನ್ನು ಏನಾದರೂ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ಅದು ಒಟ್ಟು ಕುಟುಂಬದ ಆಸ್ತಿಯಾಗಿದ್ದು, ಅದರ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ.

2. ನೀವು ದಾವಾ ಜಮೀನುಗಳಲ್ಲಿ ಯಾವ ರೀತಿಯ ಕೆಲಸ ಮಾಡುತ್ತೀದ್ದೀರಿ ಎಂದರೆ ಸಾಕ್ಷಿಯು ಗದ್ದೆ ಕೆಲಸ ಮಾಡುತ್ತಿದ್ದು, ಬೆಳೆಗಳನ್ನು ಬೆಳೆಯುತ್ತಿದ್ದೇವು ಎಂದು ನುಡಿಯುತ್ತಾರೆ. ಯಾವ ವರ್ಷದಲ್ಲಿ ಗದ್ದೆ ಕೆಲಸ ಮಾಡಿಕೊಂಡು ಬಂದಿರುತ್ತೀರಿ ಎಂದರೆ ಸಾಕ್ಷಿಯು ನನ್ನ ಮಾವನ ಮದುವೆಯಾಗುವತನಕ ಮಾಡಿಕೊಂಡು ಬಂದಿರುತ್ತೇವೆ ಎಂದು ನುಡಿಯುತ್ತಾರೆ. ಇದರ ಬಗ್ಗೆ ನಿಮ್ಮ ಹತ್ತಿರ ದಾಖಲಾತಿಗಳು ಇವೆಯಾ ಎಂದರೆ ಇರುತ್ತವೆ, ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ವಕೀಲರಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ದಾವೆಯಲ್ಲಿ ಬರೆಸಿದ ಹಾಗೆ ದಾವಾ ಜಮೀನುಗಳನ್ನು ಯಾರು ಖರೀದಿ ಮಾಡಲು ಬಂದಿರುತ್ತಾರೆ ಎಂದು ಗೊತ್ತಾ ಎಂದರೆ ಗೊತ್ತಿರುವುದಿಲ್ಲ.

ಈ ಪ್ರಕರಣದಲ್ಲಿ ಯಾವುದೇ ಸತ್ಯತೆ ಇರುವುದಿಲ್ಲ, ಸುಳ್ಳು ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ನಿಮಗೂ ಹಾಗೂ ಚುಡಿಯಾ ಇವರಿಗೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ನಿಮಗೆ ಚುಡಿಯಾ ಇವರ ಜೊತೆ ಯಾವುದೇ ಸಂಬಂಧ ಇರದೇ ಇದ್ದಿದ್ದರಿಂದ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನೀವು ವಾದಿಯರು ಮತ್ತು 1 ರಿಂದ 4ನೇ ಪ್ರತಿವಾದಿಯರು ಸೇರಿಕೊಂಡು ದಾವಾ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ನಿಮ್ಮ ಜಾತಿಯಲ್ಲಿ ಕಾಮಣ್ಣ, ಚುಡಿಯಾ ಎನ್ನುವವರು ಸಾಕಷ್ಟು ಜನರು ಇರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಚುಡಿಯಾ ಇವರು ನಮ್ಮ ಮಾವ ಎಂದು ನುಡಿಯುತ್ತಾರೆ. ನೀವು ಚುಡಿಯಾ ಇವರ ಕುಟುಂಬಕ್ಕೆ ಸೇರದೇ ಇರುವುದರಿಂದ ನಿಮಗೆ ಹಾಗೂ 1 ರಿಂದ 4ನೇ ಪ್ರತಿವಾದಿಯರಿಗೆ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಜೆಟ್ಟಿ ಮತ್ತು ಮಿನ್ನಾ ಎಂದರೆ ಯಾರು ಎಂದರೆ ಸಾಕ್ಷಿಯು ಕಾಮಣ್ಣನ ತಮ್ಮಂದಿರು ಎಂದು ನುಡಿಯುತ್ತಾರೆ. ಅವರು ಜೀವಂತ ಇರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅವರ ವಾರಸದಾರರು ಇರುತ್ತಾರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಜಟ್ಟಿ ಮತ್ತು ಮಿನ್ನಾ ಇವರ ವಾರಸುದಾರರನ್ನು ಈ ಪ್ರಕರಣದಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ಜಟ್ಟಿ ಮತ್ತು ಮಿನ್ನಾ ಇವರ ಮನೆಗಳು ಎಲ್ಲಿ ಇರುತ್ತವೆ ಎಂದರೆ ಸಾಕ್ಷಿಯು ಬೊಬ್ರುವಾಡದಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ಚುಡಿಯಾ ಇವರ ಮನೆಯ ಸಮೀಪ ಇರುತ್ತವೆ. ಜಟ್ಟಿ ಮತ್ತು ಮಿನ್ನಾ ಇವರಿಗೆ ಯಾವ ಆಸ್ತಿಗಳು ಮಂಜೂರಾಗಿರುತ್ತವೆ ಎಂದು ಹೇಳಲು ಬರುತ್ತಾ

ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಇವರಿಗೆ ಮಂಜೂರಾದ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಕಾಮಣ್ಣ ಗೇಣಿನಾತೆಯನ್ನು ಅನಾರೋಗ್ಯದ ಕಾರಣದಿಂದ ಮುಂದುವರೆಸಲು ಸಾಧ್ಯವಾಗದ ಕಾರಣ ಚುಡಿಯಾ ಇವರು ಮುಂದುವರೆಸಿದ್ದರು ಎಂದರೆ ಸರಿ. ಹಾಗೆ ಪ್ರತಿ ತಿಂಗಳು ಗೇಣಿಯನ್ನು ಕಾಮಣ್ಣ ಇವರು ಕಟ್ಟಲು ವಿಫಲರಾಗಿದ್ದರಿಂದ ಚುಡಿಯಾ ಇವರು ಕಟ್ಟುತ್ತಿದ್ದರು ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ವತಿಯಿಂದ ಚುಡಿಯಾ ಇವರೇ ಕಟ್ಟುತ್ತಿದ್ದರು ಎಂದು ನುಡಿಯುತ್ತಾರೆ. ಕಾಮಣ್ಣನ ಅನಾರೋಗ್ಯದ ಕಾರಣದಿಂದ 4-5 ವರ್ಷ ಗದ್ದೆ ಮಾಡುವುದನ್ನು ನಿಲ್ಲಿಸಿದ್ದನು ಎಂದರೆ ಸರಿಯಲ್ಲ. 4-5 ವರ್ಷ ನಿಲ್ಲಿಸಿದ್ದ, ನಂತರ ಚುಡಿಯಾ ಇವರು ಗದ್ದೆ ಮಾಡಲು ಮುಂದುವರೆಸಿರುತ್ತಾರೆ ಎಂದರೆ ಸರಿಯಲ್ಲ. ಕಾಮಣ್ಣ ಇವರು ಗದ್ದೆ ಮಾಡಲು ನಿಲ್ಲಿಸಿದ್ದರು, ಚುಡಿಯಾ ಇವರು ಮಾಲೀಕರ ಹತ್ತಿರ ಹೋಗಿ ತಾನು ಗದ್ದೆ ಮಾಡುತ್ತೇನೆ ಎಂದು ವಿಂತಿಸಿಕೊಂಡಿರುತ್ತಾನೆ ಎಂದರೆ ಸರಿಯಲ್ಲ. ಮಾಲೀಕ ಮತ್ತು ಚುಡಿಯಾ ಇವರು ಇಷ್ಟು ಗೇಣಿ ಎಂದು ನಿರ್ಧರಿಸಿದ್ದು, ಆ ಪ್ರಕಾರ ಚುಡಿಯಾ ಇವರಿಗೆ ಗೇಣಿಯನ್ನು ಕಟ್ಟಲು ಪ್ರಾರಂಭಿಸಿದರು ಎಂದರೆ ಸರಿಯಲ್ಲ. ನೀವು ಕುಟುಂಬದ ಪರವಾಗಿ ಗೇಣಿ ಕೊಡುತ್ತಿದ್ದ ಎಂದು ಸುಳ್ಳು ಹೇಳುತ್ತೀದ್ದೀರಿ ಎಂದರೆ ಸರಿಯಲ್ಲ. ಚುಡಿಯಾ ಇವರಿಗೆ ಭೂ-ನ್ಯಾಯಮಂಡಳಿಯವರು ಮಂಜೂರು ಮಾಡಬೇಕಾದರೆ ಯಮುನಾ ಆಗಲಿ ಅಥವಾ ಕಲ್ಯಾಣಿಯಾಗಲಿ ಕುಟುಂಬದ ಸದಸ್ಯರು ಇರಲಿಲ್ಲ ಎಂದರೆ ಸರಿಯಲ್ಲ. ನಿಮಗಾಗಲಿ ಅಥವಾ 1 ರಿಂದ 4 ನೇ ಪ್ರತಿವಾದಿಯರಿಗಾಗಲಿ ದಾವಾ ಆಸ್ತಿಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ

ಸರಿಯಲ್ಲ. ನೀವು ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು  ಚುಡಿಯಾ ಇವರ ಸ್ವಯಾರ್ಜಿತ ಆಸ್ತಿಗಳು ಆಗಿದ್ದರಿಂದ 5ನೇ ಪ್ರತಿವಾದಿಗೆ ಮಾತ್ರ ದಾವಾ ಆಸ್ತಿಗಳಲ್ಲಿ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.